ಐ.ಬಿ.ಸಿ. ಫ್ಯಾಕಟರಿ ಹಿಂಭಾಗ ಡಿವಿಜನ್ ನಂ. 74 ರಲ್ಲಿ ಪ್ಲಾಟ್‌ಗಳನ್ನು ಕಟ್ಟುತ್ತಿರುವುದು

619 - ಶ್ರೀ ಎನ್. ರಾಜಣ್ಣ (ಭಾರತೀ ನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐ.ಟಿ.ಸಿ. ಫ್ಯಾಕ್ಟರಿ ಹಿಂಬಾಗ ಡಿವಿಜನ್ ನಂ 74 ರಲ್ಲಿ ಬಹಳಷ್ಟು ಪ್ಲಾಟ್‌ಗಳನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಪೂರ್ವ ಅಪಾರ್ಟ್‌ಮೆಂಟ್)

ಆ) ಹಾಗಿದ್ದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಿಂದ ನಕ್ಷೆಗಳನ್ನು ಯಾವಾಗ ಮಂಜೂರು ಮಾಡಲಾಗಿದೆ?

ಇ) ನಕ್ಷೆಗನುಸಾರವಾಗಿಯೇ ಕಟ್ಟಡ ನಿರ್ಮಾಣ ನಡೆಯುತ್ತಿದೆಯೇ?

ಈ) ನಕ್ಷೆಗನುಸಾರ ರಸ್ತೆಯ ಅಗಲವೆಷ್ಟು?

ಉ) ಸರ್ಕಾರವು ರಸ್ತೆಯ ಅಗಲವನ್ನು ಉಳಿಸಿಕೊಳ್ಳಲು ಹಾಗೂ ಮಂಜೂರಾದ ನಕ್ಷೆಯಂತೆ ಪ್ಲಾಟ್‌ಗಳು ನಿರ್ಮಾಣವಾಗುವಂತೆ ಕ್ರಮತೆಗೆದುಕೊಳ್ಳುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ದಿನಾಂಕ : 16-12-1992

ಇ) ಹೌದು.

ಈ) 18.10 ಮೀಟರ್‌ಗಳು

ಉ) ಹೌದು.

ಐ.ಟಿ.ಸಿ. ಫ್ಯಾಕ್ಟರಿ ಹಿಂಭಾಗದಲ್ಲಿ ಕಟ್ಟುತ್ತಿರುವ ಅಪಾರ್ಟ್‌ಮೆಂಟ್‌ನವರಿಂದ ಅಭಿವೃದ್ಧಿ ಶುಲ್ಕ ವಸೂಲಿ.

618 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯು ಐಟಿಸಿ ಫ್ಯಾಕ್ಟರಿ ಹಿಂಭಾಗದಲ್ಲಿ ವಿಭಾಗ ನಂ. 74 ರಲ್ಲಿರುವ ಪೂರ್ವ ಅಪಾರ್ಟ್‌ಮೆಂಟ್‌ನವರಿಂದ ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡಿಲ್ಲವೇ?

ಆ) ಹಾಗಿದ್ದಲ್ಲಿ ವಸೂಲಿ ಮಾಡಿದ ಮೊತ್ತವೆಷ್ಟು?

ಇ) ಯಾವಾಗ ನಕ್ಷೆಯನ್ನು ಮಂಜೂರು ಮಾಡಲಾಗಿದೆ?

ಈ) ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡದೇ ನಕ್ಷೆಯನ್ನು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಅಭಿವೃದ್ಧಿ ಶುಲ್ಕವನ್ನು ಯಾವಾಗ ವಸೂಲಿ ಮಾಡಲಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಹೌದು ವಸೂಲಿ ಮಾಡಲಾಗಿದೆ.

ಆ) ರೂ. 6,19,828-00

ಇ) ದಿನಾಂಕ: 16-12-1992ರಂದು.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.